1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ : ಅಕ್ರಮ ಗಣಿಗಾರಿಕೆ ಬಗ್ಗೆ.

ಶ್ರೀ ಸಿದ್ದರಾಮಯ್ಯ : (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ರೂಲ್ 60 ರಡಿಯಲ್ಲಿ ನಾನೊಂದು ನೋಟೀಸ್ ಕೊಟ್ಟಿದ್ದು ಅದು ತಮ್ಮ ಗಮನಕ್ಕೆ ಬಂದಿದೆ ಎಂದು ಭಾವಿಸಿದ್ದೇನೆ. ಸರ್ಕಾರದ ಗಮನಕ್ಕೂ ಕೂಡ ಬಂದಿರುತ್ತದೆ. ಕರ್ನಾಟಕದಲ್ಲಿ ಮಿನರಲ್ ಸಂಪತ್ತು ಲೂಟಿಯಾಗುತ್ತಿದೆ. ವಿಶೇಷವಾಗಿ ಬಳ್ಳಾರಿ, ಚಿತ್ರದುರ್ಗ, ತುಮಕೂರು, ಮೈಸೂರು ಈ ಜಿಲ್ಲೆಗಳಲ್ಲಿ ಗಣಿ ಲೂಟಿಯಾಗುತ್ತಿದೆ. ಬಹಳ ಜನರು ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ. ಅಕ್ರಮ ಗಣಿಗಾರಿಕೆಯಿಂದ ಕರ್ನಾಟಕ ರಾಜ್ಯಕ್ಕೆ ಸುಮಾರು 4,500 ರೂ.ನಿಂದ 5,000 ಸಾವಿರ ಕೋಟಿ ರೂಪಾಯಿಯಷ್ಟು ರಾಜ್ಯದ ಬೊಕ್ಕಸಕ್ಕೆ ಬರಬೇಕಾದಂಥ ಹಣ ಕೆಲವು ಅಕ್ರಮ ಗಣಿಗಾರಿಕೆ ಮಾಡತಕ್ಕಂಥ ಲೂಟಿಕೋರರ ಜೇಬು ಸೇರುತ್ತಾ ಇದೆ.

ಖನಿಜ ಸಂಪತ್ತು ಈ ರಾಜ್ಯದ ಜನರ ಸಂಪತ್ತಾಗಿದೆ. ಆದ್ದರಿಂದ, ಜನರ ಮತ್ತು ಈ ರಾಜ್ಯದ ಸಂಪತ್ತನು ರಕ್ಷಣೆ ಮಾಡಬೇಕಾದಂಥ ಜವಾಬ್ದಾರಿ ಈ ರಾಜ್ಯ ಸರ್ಕಾರದ್ದಾಗಿದೆ. ಮತ್ತೆ ಇದರಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿ ಕೂಡ ಇದೆ. ಆದರೆ, ಇದನ್ನು ರೆಗ್ಯುಲೇಟ್ ಮತ್ತು ಮಾನಿಟರ್ ಮಾರತಕ್ಕಂಥದ್ದು ಹಾಗೂ ಇದನ್ನು ತಡೆಗಟ್ಟುವುದಕ್ಕೆ ಮಾಡಬೇಕಾದಂಥ ಎಲ್ಲ ಕಾನೂನು ರೀತಿಯ ಕ್ರಮಗಳನ್ನು ತೆಗೆದುಕೊಳ್ಳತಕ್ಕಂಥದ್ದು ರಾಜ್ಯ ಸರ್ಕಾರದ ಜವಾಬ್ದಾರಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಾರಿ ಒಂದು ಮಾತನ್ನು ಹೇಳಿದ್ದಾರೆ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಒಂದು ಸಾರಿ ಹೇಳಿದ್ದಾರೆ, ಶಿವಮೊಗ್ಗದಲ್ಲಿ ಕೆಡಿಪಿ ಸಭೆಯಲ್ಲಿ ರಿವ್ಯೂ ಮಾಡುವಾಗ ಒಮ್ಮೆ ಪ್ರಸ್ತಾಪ ಮಾಡಿದ್ದಾರೆ. ಮೈಸೂರಿನಲ್ಲಿ ಒಂದು ಸಾರಿ ಹೇಳಿದ್ದಾರೆ ಮತ್ತೆ ಬೆಂಗಳೂರಿನಲ್ಲಿರುವ ಅರಣ್ಯ ಭವನದಲ್ಲಿ ಹುತಾತ್ಮರ ದಿನಾಚರಣೆ ಸಂದರ್ಭದಲ್ಲಿ ಭಾಷಣ ಮಾಡುವಾಗ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಡೇಟೈಲ್ ವಿಷಯಕ್ಕೆ ಹೋಗುವುದಿಲ್ಲ. ಮತ್ತೆ ಯಾವ್ಯಾವ ದಿನಾಂಕದಂದು ಹೇಳಿದ್ದಾರೆಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮರಳು ತೆಗೆದುಕೊಂಡು ಹೋಗುವವರನ್ನು ಹಿಡಿದು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಅವರಿಗೆ ತಂದರೆ ಕೊಡುತ್ತಿದ್ದೀರಿ ಎಂದು

ಶಿವಮೊಗ್ಗದಲ್ಲಿ ಹೇಳಿದ್ದಾರೆ. ಮತ್ತೆ ಇವತ್ತಿನ ದಿವಸ ಅರಣ್ಯ ಪ್ರದೇಶದಲ್ಲಿ ಕೋಟಿಗಟ್ಟಲೆ ಹಣ ಲೂಟಿಯಾಗುತ್ತಿದೆ. ಇದನ್ನು ನಿಮ್ಮ ಕೈಯಿಂದ ತಡೆಯುವುದಕ್ಕೆ ಆಗಿಲ್ಲ ಎಂದು ಅಲ್ಲಿನ ಅಧಿಕಾರಿಗಳ ಜೊತೆ ಚರ್ಚೆ ಮಾಡುವಾಗ ಹೇಳಿದ್ದಾರೆ. ಮತ್ತೆ ಅರಣ್ಯ ಭವನದಲ್ಲಿ ಮಾತನಾಡುತ್ತಾ ಅರಣ್ಯ ಸಂಪತ್ತನ್ನು ಲೂಟಿ ಮಾಡುವುದನ್ನು ಮತ್ತು ಅಕ್ರಮ ಗಣಿಗಾರಿಕೆ ನಡೆಸುವಂಥದ್ದನ್ನು ತಡೆಗಟ್ಟುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಾಗಿಲ್ಲ. ಇದರಲ್ಲಿ ನಮ್ಮ ಸರ್ಕಾರ ವಿಫಲವಾಗಿದೆ, ನಾನು help less, ಅಸಹಾಯಕನಾಗಿದ್ದೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದರ ಜೊತೆಗೆ ಲೋಕಾಯುಕ್ತರು ಕೂಡ ತನಿಖೆ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಸಿದ್ದರಾಮಯ್ಯನವರೆ, ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ : ನಾನು ಸಬ್‌ಮಿಷನ್ ಮಾಡುತ್ತೇನೆ. ಅನಂತರ ತಾವು convince ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಅವಕಾಶ ಕೊಡಿ. ನೀವು ಪ್ರತಿಪಕ್ಷದ ನಾಯಕರಾಗಿದ್ದೀರಿ, ತಾವು ಪ್ರಸ್ತಾಪ ಮಾಡಿ. ಮಾನ್ಯ ಅಧ್ಯಕ್ಷರು ದಯಮಾಡಿ ಇದರ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಇವತ್ತು ಬಹಳ ಮಹತ್ವವಾದಂಥ ವಿಚಾರವನ್ನು ಇಟ್ಟುಕೊಂಡು ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರದ ಬಗ್ಗೆ ಅರ್ಧ ಅಥವಾ ಒಂದು ದಿವಸ ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ನಾವು ಸಿದ್ದರಿದ್ದೇವೆ. ಇದರ ಬಗ್ಗೆ ಆಮೂಲಾಗ್ರವಾಗಿ ಚರ್ಚೆಯಾಗಬೇಕು. ನಮ್ಮ ಸಂಪತ್ತು ಉಳಿಯಬೇಕು ಮತ್ತು ಯಾವುದೇ ಕಾರಣಕ್ಕೂ ನಮ್ಮ ಸಂಪತ್ತನ್ನು ಯಾರೂ ಲೂಟಿ ಮಾಡಬಾರದು ಮತ್ತು ಇದಕ್ಕೆ ಅವಕಾಶ ಕೂಡ ಸಿಗಬಾರದು. ಇದರ ಬಗ್ಗೆ ಎರಡು ಮಾತಿಲ್ಲ. ಆದರೆ, ಈ ಸಂದರ್ಭದಲ್ಲಿ ಮಾನ್ಯ ಪ್ರತಿಪಕ್ಷದ ನಾಯಕರಲ್ಲಿ ಕೇಳುವುದೇನೆಂದರೆ, ಬಜೆಟ್‌ಗೆ ಉತ್ತರ ಕೊಡುವಂಥ ಸಂದರ್ಭವಾಗಿದೆ. ಅದಕ್ಕೂ ಕೂಡ ಅದರದೇ ಆದಂಥ ಒಂದು sanctity ಮತ್ತು ಮಹತ್ವ ಇದೆ. ಅದು ಮುಗಿದ ಮೇಲೆ ಇದರ ಬಗ್ಗೆ ಚರ್ಚೆ ಮಾಡಲು ಯಾವುದೇ ಒಂದು ಸಮಯವನ್ನು ನಿಗದಿ ಮಾಡಿ. ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ allow ಮಾಡುವುದು ಬೇಡ. ಇದಕ್ಕೆ ಒಂದು ಸಮಯವನ್ನು ನಿಗದಿ ಮಾಡಿ, ಚರ್ಚೆಗೆ ನಾವು ಸಿದ್ದರಿದ್ದೇವೆ. ಅರ್ಧ

ದಿವಸ ಅಥವಾ ಒಂದು ದಿವಸ ಪೂರ್ಣವಾಗಿ ಚರ್ಚೆ ಮಾಡೋಣ. ಇದರ ಬಗ್ಗೆ ಯಾವುದೇ ಅಭ್ಯಂತರವಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಇದಕ್ಕೆ ನಿಶ್ಚಿತವಾದ ಒಂದು ಸಮಯವನ್ನು ನಿಗದಿ ಮಾಡಿ ಎಂದು ಹೇಳುತ್ತಿದ್ದೇನೆಯೇ ಹೊರತು ಇದನ್ನು ತಡೆಯುವುದಕ್ಕೆ ನಾನು ಹೊರಟಿಲ್ಲ. ಆಮೇಲೆ ಇದಕ್ಕೆ Preliminary submission ಮಾಡುವ ಅಗತ್ಯವಿಲ್ಲ. ನಿಮಗೆ ಮನವರಿಕೆಯಾದರೆ, ಸಮಯ ನಿಗದಿ ಮಾಡಿ ಚರ್ಚೆಗೆ ನಾವು ಸಿದ್ಧರಿದ್ದೇವೆ. ಮತ್ತೆ ನಾನು ಹೇಳಿದ್ದೇನೆಂದು ಅವರು ಮತ್ತೆ ಇಲ್ಲಿ ಹೇಳುತ್ತಿದ್ದಾರೆ. ಅದಕ್ಕೆ ಈಗ ಉತ್ತರ ಕೊಡುತ್ತಾ ಹೋಗುವುದು ಬೇಡ. ನಾನು ಏನನ್ನು ಹೇಳಿದ್ದೇನೆಯೋ ಅವೆಲ್ಲನ್ನು ನೀವು ಹೇಳಿ ಮತ್ತೆ ನೀವೇನು ಹೇಳಿದ್ದೀರಾ ಅವೆಲ್ಲವನ್ನು ನಾವು ಕೇಳೋಣ. ಆದ್ದರಿಂದ ಇದರ ಬಗ್ಗೆ ಅಮೂಲಾಗ್ರವಾಗಿ ಚರ್ಚೆ ಮಾಡೋಣ. ಇದರ ಬಗ್ಗೆ ಯಾವುದೇ ಅಭ್ಯಂತರ ಇಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದರ ತೀರ್ಮಾನವನ್ನು ನಿಮಗೆ ಬಿಡುತ್ತೇನೆ. ನಾನು Preliminary submission ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಿವೆಂಟ್ ಮಾಡಿದರೆ ಹೇಗೆ? Under rule 60 I gave got right to make a Preliminary submission.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಿದ್ದರಾಮಯ್ಯನವರೆ, ನಿಮ್ಮನ್ನು ತಡೆಯುವಂಥ ಕೆಲಸ ಮಾಡಿಲ್ಲ. ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ.

Sri. SIDDARAMAIAH : I agree with his proposal. I will agree.

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ನಿಲುವಳಿ ಸೂಚನೆಗೆ ಮಾನ್ಯ ಮುಖ್ಯಮಂತ್ರಿಗಳು oppose ಮಾಡಿಲ್ಲ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾವ ರೀತಿಯಲ್ಲಿ allow ಮಾಡಿದರೂ ಪರವಾಗಿಲ್ಲ. ನಾವು ಮಾತ್ರ ಚರ್ಚೆಗೆ ರೆಡಿ ಇದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಾರೆ. ಬಿ.ಎ.ಸಿ. ಯಲ್ಲಿ ಈಗಾಗಲೇ ತೀರ್ಮಾನವಾದ ಪ್ರಕಾರ ಬಜೆಟ್ ಮೇಲೆ ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡಬೇಕು.

ಶ್ರೀ ಸಿದ್ದರಾಮಯ್ಯ : ಬಿ.ಎ.ಸಿ ಪ್ರಕಾರ ಇಲ್ಲಿ ನಡೆಯುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯ ಮಂತ್ರಿಗಳು ಇನ್ನು ರಿಪ್ಲೈ ಕೊಡಬೇಕು. ಮತ್ತೆ ಆನಂತರ ತಾವು ಮಾತನಾಡುತ್ತೀರಿ. ಇವತ್ತು ಬಜೆಟ್ ಪಾಸ್ ಆದ ಮೇಲೆ ಇದರ ಚರ್ಚೆಗಾಗಿ ಮಾನ್ಯ ಅಧ್ಯಕ್ಷರು ಒಂದು ಸಮಯವನ್ನು ನಿಗದಿ ಮಾಡಲಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಏತಕ್ಕಾಗಿ ಈ ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆಂದರೆ; ಈ ರಾಜ್ಯದ ಸಂಪತ್ತು ಒಂದು ಕಡೆ ಲೂಟಿಯಾಗುತ್ತಿದೆ. ಮತ್ತೆ ನಿಮ್ಮ ಕಡೆ ರಿಸೋಸರ್ಸ್ ಇಲ್ಲ. ಮತ್ತೆ ರಿಸೋಸರ್ಸ್ ಅನ್ನು ಸರಿಯಾಗಿ ಮೊಬಿಲೈಸ್ ಮಾಡುತ್ತಿಲ್ಲ. ಲೂಟಿ ಆಗುತ್ತಿರುವುದನ್ನು ಸಹ ತಪ್ಪಿಸುತ್ತಿಲ್ಲ.

ಅಧ್ಯಕ್ಷರು : ತೀರ್ಮಾನವನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಸಬ್‌ಮಿಷನ್ ಮಾಡಿದ ಮೇಲೆ ನೀವು ತೀರ್ಮಾನ ತೆಗೆದುಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್ ಮೇಲೆ ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿ ತೆಗೆದುಕೊಳ್ಳಬೇಕೆ ಅಥವಾ ಆಮೇಲೆ ತೆಗೆದುಕೊಳ್ಳಬೇಕೆಂಬುದನ್ನು ತಮಗೆ ಬಿಡುತ್ತೇನೆ. ಅದು ನಿಮ್ಮ ಪರಮಾಧಿಕಾರ. ಆದರೆ, mention ಮಾಡುವುದಕ್ಕೂ ನನಗೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು : ತಾವು mention ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ಎಲ್ಲಿ ಮಾಡಿದೆ? ನಾನು ಪ್ರಸ್ತಾಪ ಮಾಡುವುದಕ್ಕೆ ಪ್ರಾರಂಭ ಮಾಡಿದೆ ಅವರು ಅಡ್ಡ ಬಂದರು.

ಅಧ್ಯಕ್ಷರು : ತಾವು mention ಮಾಡಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಮತ್ತೆ mention ಮಾಡುವುದು ಬೇಡ. ಈಗ ಚರ್ಚೆ ಮಾಡುವುದು ಬೇಡ.

ಶ್ರೀ ಸಿದ್ದರಾಮಯ್ಯ : ಏಕೆ ಚರ್ಚೆ ಮಾಡುವುದು ಬೇಡ?

ಶ್ರೀ ಜಗದೀಶ್ ಶೆಟ್ಟರ್ : ಚರ್ಚೆ ಮಾಡುವುದು ಬೇಡವೆಂದು ಹೇಳಿಲ್ಲ. ಚರ್ಚೆ ಮಾಡುವುದಕ್ಕೆ ಸರ್ಕಾರ ತಯಾರಿದೆ. ಚರ್ಚೆ ಮಾಡುವುದಕ್ಕೆ ಸಮಯ ನಿಗದಿ ಮಾಡಿ ಎಂದು ಹೇಳುತ್ತಿದ್ದೇವೆ. ಆದ್ದರಿಂದ, ಚರ್ಚೆಗೆ ಸಮಯ ನಿಗದಿ ಮಾಡಿದರೆ ಮುಗಿದು ಹೋಯಿತು.

ಶ್ರೀ ಸಿದ್ದರಾಮಯ್ಯ : ಸಬ್‌ಮಿಷನ್‌ಗೆ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು : Preliminary submission ಗೆ ಅವಕಾಶ ಇಲ್ಲವೆಂದು ಹೇಳುತ್ತಿಲ್ಲ. I will take a decision.

ಶ್ರೀ ಸಿದ್ದರಾಮಯ್ಯ : ನನ್ನ ಸಬ್‌ಮಿಷನ್ ಏನೆಂದರೆ, before the reply is given by the Chief Minister, since it is very important matter concerning the resources of the state ಅದಕ್ಕೋಸ್ಕರ ಅವರು ಉತ್ತರ ಕೊಡುವುದಕ್ಕಿಂತ ಮೊದಲೇ ಇದರ ಚರ್ಚೆಗೆ ಅವಕಾಶ ಕೊಡುವುದಕ್ಕಾಗಿ ನಿಮ್ಮ ಮನಸ್ಸನ್ನು ಒಪ್ಪಿಸಬೇಕೆಂದು ನಾವು ಇದ್ದೇವೆ. not the Chief Minister.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಲ್ಲಿ ಸದುದ್ದೇಶ ಏನೂ ಇಲ್ಲ.

ಶ್ರೀ ಸಿದ್ದರಾಮಯ್ಯ : ಸದುದ್ದೇಶ ಇಲ್ಲವೆಂದು ಹೇಳುತ್ತಿದ್ದಾರೆ. ಆದರೆ, ಸದುದ್ದೇಶ ಹೇಗಿದೆ ಎಂಬುದನ್ನು I will explain.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಮಾತನ್ನು ಪೂರ್ತಿ ಹೇಳುವುದಕ್ಕೆ ಬಿಡಬೇಕು. ಸದುದ್ದೇಶ ಏಕೆ ಇಲ್ಲವೆಂದು ನಾನು ಹೇಳುತ್ತಿದ್ದೇನೆಂದರೆ ಇವತ್ತಿನ ದಿವಸ ನಾನು ಬಜೆಟ್ ಮೇಲೆ ನೀಡುವ ಉತ್ತರದ ಮಹತ್ವವನ್ನು ಕಡಿಮೆ ಮಾಡಬೇಕೆಂಬ ಪ್ರಯತ್ನದಲ್ಲಿ ನೀವು ತೊಡಗಿದ್ದೀರಿ ಎಂಬ ಅನುಮಾನ ನನಗೆ ಬರುತ್ತಿದೆ. ಅದಕ್ಕೆ ನಾನೇನು ಹೇಳುತ್ತಿದ್ದೇನೆಂದರೆ, ಚರ್ಚೆ ಯಾವಾಗ ಮಾಡಬೇಕೆಂಬುದರ ಬಗ್ಗೆ ಈಗಲೇ ಸಮಯ ನಿಗದಿ ಮಾಡಿ. ಆದರೆ, ಮಾನ್ಯ ಅಧ್ಯಕ್ಷರೆ, ನಾಳೆ ಎಷ್ಟು ಗಂಟೆಗೆ ಈ ವಿಷಯ ತೆಗೆದುಕೊಳ್ಳಬೇಕೆಂದು ಸಮಯವನ್ನು ನಿಗದಿ ಮಾಡಿ. ಅಥವಾ ಯಾವತ್ತಾದರೂ ಸಮಯ ನಿಗದಿ ಮಾಡಿದರೂ ಕೂಡ ನಾವು ಚರ್ಚೆಗೆ ಸಿದ್ದರಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳೆ, ಇದರ ಮಹತ್ವ ಹೊರಟು ಹೋಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇದ್ದಕ್ಕಿದ್ದ ಹಾಗೆ ಕೊನೆಗಳಿಗೆಯಲ್ಲಿ ಇದು ಏಕೆ ನೆನಪಾಯಿತು?

ಶ್ರೀ ಸಿದ್ದರಾಮಯ್ಯ : ಚರ್ಚೆ ಮಾಡುವುದಕ್ಕೆ ಬೇರೆ ಬೇರೆ ವಿಚಾರಗಳಿದ್ದವಲ್ಲ.

ಅಧ್ಯಕ್ಷರು : ನಾನು ತೀರ್ಮಾನ. ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : I have not given importance to those matter. ಬೇರೆ ಬೇರೆ ವಿಚಾರಗಳಿದ್ದವು. ಇವತ್ತು ಅವಕಾಶ ಇರುವುದರಿಂದ ಈ ವಿಷಯ ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತವಾಗಿ ಇದು ಮಹತ್ವದ ವಿಷಯ. ಆದ್ದರಿಂದ, ಚರ್ಚೆ ಮಾಡೋಣ. ಇದಕ್ಕೆ ನಾವು ಒಪ್ಪಿಗೆ ಕೊಡುತ್ತಿದ್ದೇವೆ. ಆದ್ದರಿಂದ, you please fix up the time.

ಅಧ್ಯಕ್ಷರು : ಆಯಿತು. I will fix.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ನಮ್ಮ ಸಹಾಯಕ್ಕೆ ಬರದಿದ್ದರೆ ಹೇಗೆ? Should you not protect our interest? Is it not the duty of all our Members?

ಅಧ್ಯಕ್ಷರು : ತಾವು ಇವತ್ತು ಹೇಳಿದ್ದೀರಿ, your interest will be protected.

Sri Siddaramaiah : Also the wealth of the State?

ಅಧ್ಯಕ್ಷರು : ಈಗ ನಿಮ್ಮನ್ನು ಯಾರು ಪ್ರಿವೆಂಟ್ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : 2008ರಲ್ಲಿ ಲೋಕಾಯುಕ್ತ ಕೊಟ್ಟಿರುವ ವರದಿ ಮೇಲೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನೀವು ಈ ವಿಷಯ ಮಾತನಾಡಿ, ಇದಕ್ಕೆ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಸದಸ್ಯರು ನಿಲುವಳಿ ಸೂಚನೆಗೆ ಅನುಮತಿಯನ್ನು ಕೇಳಿದ್ದೀರಿ. ಈ ಘಟನೆ ಇತ್ತೀಚಿನ ಘಟನೆಗೆ ಸಂಬಂಧಪಡದೆ, ಮೂರು issue ಗಳು ಇದರಲ್ಲಿವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಈ ರೀತಿಯಾದರೆ ರೂಲ್ 60 ತೆಗೆದು ಹಾಕಬೇಕಾಗುತ್ತದೆ.

ಅಧ್ಯಕ್ಷರು : ನಾನು ಹೇಳುವುದನ್ನು ಕೇಳಿ. On the face of the record ನೀವು ಮೂರು issue ಗಳನ್ನು ತೆಗೆದುಕೊಂಡಿದ್ದೀರಿ. ಇದರಲ್ಲಿ ಒಂದೇ issue ಇಲ್ಲ. ಇದರಲ್ಲಿ ಸಾವಿರಾರು ಕೋಟಿ ರೂಪಾಯಿ ನಷ್ಟವೆಂದು ಹೇಳಿದ್ದೀರಿ, ಮತ್ತೆ 350 ವರ್ಷಗಳಿಗೂ ಹಳೆಯದಾದ ಸುಗ್ಗಲಮ್ಮಗುಡ್ಡ ದೇವಾಲಯದ ಬಗ್ಗೆ ಹೇಳಿದ್ದೀರಿ.

Sri Siddaramaiah : They are all connected matters, that is why I included.

Mr. Speaker : I will take this as a matter of urgent public importance.

ಶ್ರೀ ಸಿದ್ದರಾಮಯ್ಯ : All these materials.....

ಅಧ್ಯಕ್ಷರು : ಜರೂರಾಗಿರುವ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತೇನೆ. ಎಲ್ಲರೂ ಭಾಗವಹಿಸಿ ದೀರ್ಘವಾಗಿ ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಕೊನೆಯಲ್ಲಿ ನೀವು ಏನಾದರೂ ತೀರ್ಮಾನ ತೆಗೆದುಕೊಳ್ಳಿ. We will go by your decision.

Mr. Speaker : Government is ready for discussion.

ಶ್ರೀ ಸಿದ್ದರಾಮಯ್ಯ : ಇವತ್ತೇ ಮಾಡುತ್ತೀರಾ?

ಅಧ್ಯಕ್ಷರು : ರಿಪ್ಲೈ ಆದ ಮೇಲೆ ಇವತ್ತೇ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಅಕ್ರಮ ಗಣಿಗಾರಿಕೆ ಕೇವಲ ಕರ್ನಾಟಕಕ್ಕೆ ಸೀಮಿತವಾಗಿಲ್ಲ. ಇವತ್ತಿನ ದಿವಸ ಇದರ ಬಗ್ಗೆ ದೇಶವ್ಯಾಪ್ತಿ ಚರ್ಚೆಯಾಗುತ್ತಿರುವಂಥ ವಿಷಯವಾಗಿದೆ. ಅಕ್ರಮ ಗಣಿಗಾರಿಕೆ ಎಂದರೇನು ಎಂಬ ವಿಷಯದ ಬಗ್ಗೆ ಇಡೀ ದೇಶದ ಜನರು ನೋಡುವಂಥ ಸಂದರ್ಭ ಇದೆ.

ಅಧ್ಯಕ್ಷರು : ಎಲ್ಲವನ್ನು ಬೆಳಕು ಚೆಲ್ಲುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನಮ್ಮ ಮನವಿ ಏನೆಂದರೆ, ನಿಲುವಳಿ ಸೂಚನೆ ಮೇಲೆ ಅದರ ಬಗ್ಗೆ ಚರ್ಚೆ ಮಾಡಿದಾಗ ಅದಕ್ಕೆ ಅರ್ಥ ಬರುತ್ತದೆಂಬ ದೃಷ್ಟಿಯಿಂದ ನಾವು ಹೇಳಿದ್ದೇವೆ. ಬೇರೆ ವಿಧಾನದ ಮೂಲಕ ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಹೇಳುವುದು ಸರಿಯಾಗವುದಿಲ್ಲ. ದೇಶದ ಹಿತದೃಷ್ಟಿಯಿಂದ ಮತ್ತು ಸಂಪತ್ತಿನ ಹಿತದೃಷ್ಟಿಯಿಂದ ನಿಲುವಳಿ ಸೂಚನೆ ಮೇಲೆ ಚರ್ಚೆಗೆ ಅವಕಾಶ ಕೊಡಿ. ಇದರ ಚರ್ಚೆಗೆ ಯಾವಾಗಲಾದರೂ ತಾವು ಕಾಲ ನಿಗದಿ ಮಾಡಿ. ಆದರೆ, ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಲು allow ಮಾಡಿದರು ಎಂಬ ಮೆಸೇಜ್ ಹೋಗಬೇಕು.

Mr. Speaker : That is your demand. I will take a decision.

ಶ್ರೀ ಸಿದ್ದರಾಮಯ್ಯ : ಯಡಿಯೂರಪ್ಪನವರು ಫೈನಾನ್ಸ್ ಮಿನಿಸ್ಟರ್ ಆಗಿ ದುಡ್ಡಿಲ್ಲವೆನ್ನುತ್ತಿದ್ದಾರೆ. ಈಗ 5000–6000 ಕೋಟಿ ರೂ.ಗಳನ್ನು ಬಿಟ್ಟು

O.31 F-3

ಬಿಟ್ಟಿದ್ದೀರಲ್ಲಾ ಎಂದು ಅವರಿಗೆ ಹೇಳೋಣ ಅಂಥ. ದುಡ್ಡು ಸಿಕ್ಕಿದರೆ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲವೆ? ನಿಮಗೆ ಸರ್ಕಾರದಿಂದ ಒಳ್ಳೆಯ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನಾನು ಹೇಳುವುದಕ್ಕೆ ಹೋಗುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರಿಗೆ, ಇಲ್ಲಿ 5 ಬಾರಿ ಹಣಕಾಸು ಸಚಿವರಾಗಿ ಮತ್ತು ಆಡಳಿತ ಪಕ್ಷದಲ್ಲಿದ್ದು ಅವರಿಗೆ ಅಪಾರ ಅನುಭವವಿದೆ. ಎಲ್ಲೆಲ್ಲಿ ಯಾರ್ಯಾರ ಕಾಲದಲ್ಲಿ ಏನೇನು ಲೂಟಿ ಆಗುತ್ತಿತ್ತು ಎನ್ನುವ ಮಾಹಿತಿ ನಿಮ್ಮ ಹತ್ತಿರ ಇದೆ. ನಮ್ಮ ಕಾಲ ಇರಬಹುದು, ಹಿಂದಿನ ಕಾಲ ಇರಬಹುದು. ಹಿಂದೆ ಲೋಕಾಯುಕ್ತರು ಯಾವ ಮುಖ್ಯಮಂತ್ರಿಗಳ ಮೇಲೆ ಸಚಿವರುಗಳ ಮೇಲೆ ಮತ್ತು ಸದಸ್ಯರ ಮೇಲೆ ಆರೋಪ ಮಾಡಿದ್ದರು ಎಲ್ಲವನ್ನೂ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ : CBI ಗೆ ವಹಿಸಿ ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ನೋಡಿ, ಮಾತೆತ್ತಿದರೆ CBI, ಇದೆಲ್ಲಾ ಆದ ಮೇಲೆ ಮಾತನಾಡೋಣ ಸ್ವಾಮಿ.

ಶ್ರೀ ಸಿದ್ದರಾಮಯ್ಯ : CBI ಮಾಡಿ, ಯಾರ್ಯಾರು ಸಿಕ್ಕಿಹಾಕಿ ಕೊಂಡಿದ್ದಾರೆ ಎಲ್ಲರೂ ನೀರು ಕುಡಿಯಲಿ ನಮಗೇನಾಬೇಕು.?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೇನು ಅದಕ್ಕೆ ವಿರೋಧ ಮಾಡುತ್ತಿಲ್ಲವಲ್ಲಾ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಸಿಕ್ಕಿಕೊಂಡರೆ ನನಗೂ ಆಗಲಿ ನೀರು ಕುಡಿಯೋಣ. ನೀವು ಸಿಕ್ಕಿಹಾಕಿಕೊಂಡರೆ ನೀವು ನೀರು ಕುಡಿಯಿರಿ. ಇನ್ಯಾರೋ ಸಿಕ್ಕರೆ ಅವರು ನೀರು ಕುಡಿಯುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ವಿನಂತಿ ಏನೆಂದರೆ, ಯಾವುದೇ ಒಂದು ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುತ್ತದೆ. ಅವರು ನನ್ನ ಮೇಲೆ ಆರೋಪ ಮಾಡುವುದು ಅದಕ್ಕೆ ನಾನು ಏನೋ ಹೇಳುವುದು.

ಶ್ರೀ ಸಿದ್ದರಾಮಯ್ಯ : ನಾನೇನು ಆರೋಪ ಮಾಡಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೇ ವಿಷಯ ಇರಬಹುದು, ಉತ್ತರ ಕೊಡಬೇಕಾಗುತ್ತದೆ.

Sri Siddaramaiah : I have not made any allegation.

ಶ್ರೀ ಬಿ.ಎಸ್. ಯಡಿಯೂರಪ್ಪ : Forest Guest House ನಲ್ಲಿ ಆ ರೀತಿ ಹೇಳಿದರು, ಇಲ್ಲಿ ಹೀಗೆ ಹೇಳಿದರು. ಅದಕ್ಕೆ ನಾನು ಇನ್ನೊಂದು ಹೇಳುವುದು.

ಶ್ರೀ ಸಿದ್ದರಾಮಯ್ಯ : ನಾನು allegation ಮಾಡಿಯೇ ಇಲ್ಲ. General Submission.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಆರೋಪ ಮಾಡಿದರೂ ನಮ್ಮ ಅಭ್ಯಂತರವೇನಿಲ್ಲ. ನಾನು ಇದರ ಬಗ್ಗೆ ವ್ಯವಸ್ಥಿತವಾಗಿ ಚರ್ಚೆ ಆಗಬೇಕೆಂದು ಆವತ್ತಿನಿಂದ ಹೇಳುತ್ತಿದ್ದೇನೆ. NICE ಬಗ್ಗೆ ಚರ್ಚೆ ಆಗಬೇಕು. ಗಣಿಗಾರಿಕೆ ಬಗ್ಗೆ ಚರ್ಚೆ ಆಗಬೇಕು. ಇದಕ್ಕೆ ಒಂದು ದಿವಸ ನಿಗದಿ ಮಾಡಿ. ನಾವು ಬೇಡವೆಂದು ಹೇಳುತ್ತಿಲ್ಲವಲ್ಲ.

ಶ್ರೀ ಸಿದ್ದರಾಮಯ್ಯ : ಈ ರಾಜ್ಯದ ಹಿತದೃಷ್ಟಿಯಿಂದ ಸದುದ್ದೇಶದಿಂದ ಈ ರಾಜ್ಯದ ಸಂಪತ್ತನ್ನು ರಕ್ಷಣೆ ಮಾಡಲಿಕ್ಕೋಸ್ಕರವಾಗಿ ಅದು ಲೂಟಿ ಆಗಬಾರದು, ಆ ಸದುದ್ದೇಶದಿಂದ ಹೇಳಿದೆ. ನಾನು ಮಾತನಾಡುವಾಗ ಇವರು ದೆಹಲಿಗೆ ಹೊರಟು ಹೋದರು. ಇವರು ನಮ್ಮ ಮಾತನ್ನೇ ಕೇಳಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಕೊನೆಯ ಪಕ್ಷ ಅವರ ಬಾಯಿಯಿಂದ ಒಂದು ಮಾತು ಬರಬೇಕಾಗಿತ್ತು. ಬಹುಶಃ ಈ ದೇಶದಲ್ಲಿ ...

ಶ್ರೀ ಸಿದ್ದರಾಮಯ್ಯ : ಮತ್ತೆ ನೋಡಿ ಸರ್ ಉತ್ತರ ಕೊಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಉತ್ತರವನ್ನು ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಇಬ್ಬರು ಹೀಗೆ ಮಾತನಾಡಿಕೊಂಡು ಹೋದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಉತ್ತರ ಕೊಡುತ್ತಿಲ್ಲ ಒಂದು ನಿಮಿಷ. ಗಣಿಗಾರಿಕೆಯ ಬಗ್ಗೆ ಬಿಗಿ ನಿಲುವು ತೆಗೆದುಕೊಂಡಂಥ ಮೊದಲನೇ ಸರ್ಕಾರ ಯಡಿಯೂರಪ್ಪನ ಬಿ.ಜೆ.ಪಿ. ಸರ್ಕಾರ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವು ರಕ್ಷಣೆ ಮಾಡುವುದಕ್ಕೆ ಸಂಪೂರ್ಣ ವಿಫಲರಾಗಿದ್ದೀರಿ, ಅಸಹಾಯಕರಾಗಿದ್ದೀರಿ, ಇದು ನಮ್ಮವಾದ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ವಾದ ಮಂಡನೆ ಮಾಡುವುದಕ್ಕೆ ನಿಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ.

ಶ್ರೀ ಸಿದ್ದರಾಮಯ್ಯ : ಆರ್ಥಿಕ ನಷ್ಟವಾಗುವುದಕ್ಕೆ ಇವರೇ ಕಾರಣ ಎನ್ನುವುದೇ ವಾದ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸತ್ಯ ಏನು ಎನ್ನುವುದು ಹೊರಗಡೆ ಬರಲಿ. ಚರ್ಚೆ ಮಾಡೋಣ.

Sri Siddaramaiah : That's why I am raising this issue.

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧ್ಯಕ್ಷರೆ, ಸಮಯ ನಿಗದಿ ಮಾಡಿ. ಯಾವ ರೂಪದಲ್ಲಿ ಚರ್ಚೆಯಾಗಬೇಕು ಎನ್ನುವುದನ್ನು ತಾವು ನಿಗದಿ ಮಾಡಿ. ಚರ್ಚೆಗೆ ಸಿದ್ದವಿದ್ದೇವೆ ನಾವು ಇಲ್ಲವೆಂದು ಹೇಳುತ್ತಿಲ್ಲ. ನಾನು ಎದ್ದು ನಿಂತುಕೊಂಡು ಒಪ್ಪಿಕೊಂಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮುಖ್ಯಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ. ತಾವು ಈ ಚರ್ಚೆಗೆ ಸಮಯ ನಿಗದಿ ಮಾಡಿ.

ಅಧ್ಯಕ್ಷರು : ನಾಳೆ ಮಧ್ಯಾಹ್ನ ಮಾಡೋಣ.

ಶ್ರೀ ಸಿದ್ದರಾಮಯ್ಯ : ನಾಳೆ ಕೊನೆಯ ದಿವಸ ಇರುವುದರಿಂದ ಬೆಳಿಗ್ಗೆ ಮಾಡಬೇಕು.

ಅಧ್ಯಕ್ಷರು : ಮಾಡೋಣ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಹೇಳುವ ಸಮಯಕ್ಕೆ ನಾವು ಸಿದ್ದ ಇದ್ದೇವೆ.

ಶ್ರೀ ಸಿದ್ದರಾಮಯ್ಯ : ಅವರು ನಮ್ಮ ಕೈಗೆ ಸಿಕ್ಕಿ ಉತ್ತರವನ್ನು ಕೊಡಬೇಕಲ್ಲಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರು ನಿಗದಿ ಮಾಡುವ ಸಮಯಕ್ಕೆ ನಾವು ಸಿದ್ದ ಇದ್ದೇವೆ.

ಶ್ರೀ ಸಿದ್ದರಾಮಯ್ಯ : ಎಷ್ಟೊತ್ತಾದರೂ ನಾಳೆ ಉತ್ತರ ಕೊಡಬೇಕು. ತಾವು ಬೆಳಿಗ್ಗೆ ತೆಗೆದುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಯಾವ ಸಮಯವೆಂದು ನಿಶ್ಚಯವಾಗುತ್ತದೆ. ಆಗ ಸಮಯ ನಿಗದಿ ಮಾಡಿ. ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು ಪ್ರಸ್ತಾಪಿಸಿದ ವಿಷಯ ರಾಜ್ಯದ ಗಣಿಗಾರಿಕೆಯಿಂದ ಇತ್ತೀಚಿಗೆ ಸಾವಿರಾರು ಕೋಡಿ ರೂ.ಗಳ ನಷ್ಟ ಅದರ ಜೊತೆಗೆ 350 ವರ್ಷಗಳಿಗೂ ಹಳೆಯದಾದ ಸುಗ್ಗಲಮ್ಮಗುಡ್ಡ ದೇವಾಲಯವನ್ನು ನಾಶಪಡಿಸಿರುವ ಬಗ್ಗೆ ಸಂಬಂಧಪಟ್ಟ ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ಅವಕಾಶ ಬೇಕೆಂದು ಕೋರಿರುತ್ತಾರೆ. ವಿಷಯವನ್ನು ಪರಿಶೀಲಿಸಿ ವಿಷಯವು ಇತ್ತೀಚೆಗೆ ನಡೆದ ಘಟನೆಗೆ ಸಂಬಂಧಪಟ್ಟಿರುವುದಿಲ್ಲ. ನಿಲುವಳಿ ಸೂಚನೆಯಲ್ಲಿ ಮಂಡಿಸಿರುವ ವಿಷಯವು ಒಂದಕ್ಕಿಂತ ಹೆಚ್ಚು ಇರುವುದರಿಂದ ನಿಲುವಳಿ ಸೂಚನೆಯಲ್ಲಿಯ ಪ್ರಸ್ತಾವನೆಯನ್ನು ತಿರಸ್ಕರಿಸಿ ಸಾರ್ವಜನಿಕ ಮಹತ್ವದ ವಿಷಯವೆಂದು ಪರಿಗಣಿಸಿ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ನೀಡಿದೆ.

ಶ್ರೀ ಸಿದ್ದರಾಮಯ್ಯ : ನಾಳೆ ಬೆಳಿಗ್ಗೆ ಎಂದು ಹೇಳಿಬಿಡಿ.

ಅಧ್ಯಕ್ಷರು : ಸಮಯವನ್ನು ನಿಗದಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಇನ್ನೇನು ಬರುತ್ತದೋ ಅಷ್ಟೊತ್ತಿಗೆ.

ಅಧ್ಯಕ್ಷರು : ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ. ಈಗ ವಿತ್ತೀಯ ಕಲಾಪ. ಮಾನ್ಯ ರೇವಣ್ಣನವರು.

ಶ್ರೀ ಸಿದ್ದರಾಮಯ್ಯ: ಮಾನ್ಯ ಮಹಾದೇವಪ್ಪನವರು ಮಾತನಾಡುತ್ತಾರೆ.

ಅಧ್ಯಕ್ಷರು : ಆಮೇಲೆ, ಇದು BAC ಯಲ್ಲಿ ತೀರ್ಮಾನ ವಾಗಿರುವುದು.

ಶ್ರೀ ಸಿದ್ದರಾಮಯ್ಯ : ಯಾವಾಗ ತೆಗೆದುಕೊಳ್ಳುತ್ತೇನೆಂದು ಹೇಳಲಿಲ್ಲ.

ಅಧ್ಯಕ್ಷರು : ವಿತ್ತೀಯ ಕಾರ್ಯಕಲಾಪ ಮುಗಿದ ತಕ್ಷಣ ತೆಗೆದು ಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ನೀವು ಮಧ್ಯಾಹ್ನದ ಮೇಲೆ ಉತ್ತರವನ್ನು ಕೊಡಿ.

ಅಧ್ಯಕ್ಷರು : ಇಲ್ಲ, ಇದು BAC ಯಲ್ಲಿ ತೀರ್ಮಾನವಾಗಿದೆ. Please ಸಹಕಾರ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ತಮ್ಮ ಅಜೆಂಡಾ ಪ್ರಕಾರ ಇವತ್ತು ಬೆಳಿಗ್ಗೆ ಮುಖ್ಯಮಂತ್ರಿಗಳ ರಿಪ್ಲೈ ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು : ಹೌದು ಬೆಳಿಗ್ಗೆಯೇ ಮಾಡಬೇಕಾಗಿತ್ತು. ನಿನ್ನೆ ರೇವಣ್ಣನವರು ಇರಲಿಲ್ಲ. ಮಾನು ರೇವಣ್ಣನವರು ಸ್ವಲ್ಪ ಬೇಗ ಮುಗಿಸಬೇಕು.

2. ವಿತ್ತೀಯ ಕಾರ್ಯಕಲಾಪ :

ವಿಷಯ : 2010–11ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ ಮತ್ತು ಸರ್ಕಾರದ ಉತ್ತರ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಾಗಿ, ಹಣಕಾಸು ಸಚಿವರಾಗಿ ಇದು ಅವರ ಐದನೇ ಸಾರಿ ಬಜೆಟ್‌ನ್ನು ಮಂಡನೆ ಮಾಡುತ್ತಿರುವುರು. ಕನ್ನಡಿಗರ ತಾಯಿ ಭುವನೇಶ್ವರಿಯ ಕೃಪೆಯಿಂದ ಹಾಗೂ ಕರ್ನಾಟಕದ ಜನತೆಯೆ ಆಶೀರ್ವಾದದಿಂದ ಸತತವಾಗಿ ಕರ್ನಾಟಕ ಸರ್ಕಾರದ 5ನೇ ಮುಂಗಡ ಪತ್ರವನ್ನು "ನಮ್ಮ ನಾಡಿನ ನೇಗಿಲ ಹೆಸರಿನಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿದ್ದೇನೆ, ನಮ್ಮ ಸರ್ಕಾರವು ರಾಷ್ಟ್ರಕವಿ ಕುವೆಂಪುರವರ ನೇಗಿಲಯೋಗಿಯ ಹಾಡನ್ನು ನಾಡಗೀತೆಯ ಮಟ್ಟಕ್ಕೇರಿಸಿ ರೈತರ ಏಳಿಗೆಯ ಬಗ್ಗೆ ಪ್ರತಿಯೊಂದು ಮುಂಗಡ ಪತ್ರದಲ್ಲಿ ಆದ್ಯತೆಯನ್ನು ನೀಡುತ್ತೇವೆಂದು, ಎಲ್ಲಾ ಸಮಾಜಕ್ಕೆ ಸಮಪಾಲಾಗಿ ನಾನು ಮಾಡುತ್ತೇನೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ" ನಾನು ರೈತ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಏನು ಸರ್ಕಾರದಿಂದ ನೀಡಿರುವ action taken report ಇದೆ, ಅದನ್ನು ನೋಡಿದರೆ ಗೊತ್ತಾಗುತ್ತದೆ. ಈ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಯನ್ನು ಮೊದಲಿಗೆ ತೆಗೆದುಕೊಂಡಿದ್ದಾರೆ. ನಮ್ಮ ಸಹಕಾರಿ ಸಚಿವರು ಇದ್ದಾರೆಯೋ ಇಲ್ಲವೋ ಗೊತ್ತಿಲ್ಲ. ರೈತರಿಗೆ 3% ಬಡ್ಡಿದರದಲ್ಲಿ ಸಾಲವನ್ನು ಕೊಡುವುದಕ್ಕೆ 250 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆಂದು ಹೇಳಿದರು. 2009–10ರ ಸಾಲಿನ ಆಯವ್ಯಯದಲ್ಲಿ ಒಬ್ಬ ರೈತರಿಗೆ ಸುಮಾರು 50,000 ರೂಪಾಯಿಗಳವೆರೆಗೆ ಸುಮಾರು 250 ಕೋಟಿ ರೂಪಾಯಿಗಳನ್ನು ಎಲ್ಲಾ Nationalized Bank ಇರಬಹುದು, ಎಲ್ಲಾ ಬ್ಯಾಂಕಿನಿಂದ ಸಾಲನ್ನು ಕೊಡುತ್ತೇವೆಂದು ಹೇಳಿದರು. ಆದರೆ